ಪ್ರಸ್ತಾವ ಆಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೇ, "1998ರ ಕರ್ನಾಟಕ ಪೋಲಿಸ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1998ರ ಕರ್ನಾಟಕ ಪೋಲಿಸ್ (ತಿದ್ದುಪಡಿ) ವಿಧೇಯಕ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಸದನ ಒಪ್ಪಿಗೆ ನೀಡಲಾಯಿತು

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1998ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಇವತ್ತು 5 ಕಿಲೋ ವ್ಯಾಟ್ ಮೇಲೆ ಇರುವಂತಹ ಜನರೇಟರನ್ನು ಅಳವಡಿಸುವಂಥ ಸಂದರ್ಭದಲ್ಲಿ ಅದಕ್ಕೆ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಅವರ ಹತ್ತಿರ ಸರ್ಟಿಫಿಕೇಟ್ ತೆಗೆದುಕೊಂಡು ಇದನ್ನು ಅಳವಡಿಸಬೇಕಾಗಿತ್ತು. ಆದರೆ ಈ ಮಿತಿಯನ್ನು 5 ಕಿಲೋವ್ಯಾಟ್ ಇದ್ದುದ್ದನ್ನು 10 ಕಿಲೋವ್ಯಾಟ್ ಜಾಸ್ತಿ ಮಾಡಿದ್ದೇವೆ. 10 ಕಿಲೋವ್ಯಾಟ್ ಒಳಗಡೆ ಇರುವವರು ಜನರೇಟರನ್ನು ಅಳವಡಿಸಿಕೊಂಡು ಬೇಕಾದರೆ ಅಲ್ಲಿ ತಮ್ಮ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ಆಫೀಸಿಗೆ ಹೋಗಿ ಜನರೇಟರ್ ಅಳವಡಿಸಿರುವುದಕ್ಕೆ ಒಂದು ಅರ್ಜಿ ಕೊಟ್ಟರೆ ಅವರು ಬಂದು ಅದರ ಸೇಫ್ಟಿ ಬಗ್ಗೆ ಚೆಕ್ ಮಾಡಿಕೊಂಡು ಹೋಗುತ್ತಾರೆ. ಮೊದಲು ಇದಕ್ಕೆ ಸರ್ಟಿಫಿಕೇಟ್ ಬೇಕಾಗಿತ್ತು ಈಗ ಆ ಸರ್ಟಿಫಿಕೇಟ್ ಬೇಕಾಗಿಲ್ಲ. ಅದನ್ನು ತೆಗೆದು ಹಾಕಿದ್ದೇವೆ. ಗೌವರ್ನಮೆಂಟ್ ಆಫ್ ಇಂಡಿಯಾದವರು, ಇಂಡಿಯನ್ ಎಲೆಕ್ಟ್ರಿಸಿಟಿ ಆ್ಯಕ್ಟ್ ಅಮೆಂಡ್‌ಮೆಂಟ್‌ನಲ್ಲಿ ತೆಗೆದುಹಾಕಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇದು ಒಳ್ಳೆಯದು. 5 ಕಿಲೋವ್ಯಾಟ್‌ನಿಂದ10 ಕಿಲೋವ್ಯಾಟ್‌ಗೆ ಏರಿಸಿ ಮಾಡಿದ್ದರಿಂದ ಒಂದು ರೀತಿ ಅನುಕೂಲವಾಗುತ್ತದೆ. ಸಣ್ಣಕೈಗಾರಿಕೆಗಳಿಗೆ ಅನುಕೂಲವಾಗಿದೆ. ಆದರೆ ಒಂದು ವಿಚಾರ ಏನೆಂದರೆ ಎಗ್ಸೆಂಪ್‌ಷನ್ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಇದೆ. ನನಗೆ ಇನ್ನೊಂದು ಭೀತಿ ಎಂದರೆ 10 ಕಿಲೋವ್ಯಾಟ್ ಮೇಲೆ ಯಾರು ಡೀಸಲ್ ಜನರೇಟರ್ ಇಟ್ಟುಕೊಳ್ಳುತ್ತಾರೆ ಅಥವಾ ಪ್ರೈವೇಟ್ ಫ್ಯಾಕ್ಟರೀಸ್‌ನವರು ಇಟ್ಟುಕೊಂಡಿರುವವರಿಗೆ ಅವರು ಟ್ಯಾಕ್ಸ್ ಹಾಕತಕ್ಕಂಥ ಸಂಭವ ಕೂಡ ಇದೆ. ಇದರಲ್ಲಿ ಇನ್ನೊಂದು ವಿಚಾರ ಅಡಗಿದೆ. ಇದು 5 ರಿಂದ 10ರವರೆಗೆ ಎಗ್ಸಂಪ್‌ಷನ್ ಕೊಡುವುದು ಬಿಟ್ಟು ಅದರ ಮೇಲೆ ಇರತಕ್ಕಂಥ ಡೀಸಲ್ ಜನರೇಟರ್ ಮೇಲೆ ಟ್ಯಾಕ್ಸನ್ನು ಏರಿ ಅದನ್ನು ಕಲೆಕ್ಟ್ ಮಾಡಬೇಕು ಎನ್ನುವುದನ್ನು ಕೂಡ ಇದರಲ್ಲಿ ಅಳವಡಿಸಿಕೊಂಡು ಹಾಕತಕ್ಕಂಥ ಸಾಧ್ಯತೆ ಇದೆ ಎಂದು ಹೇಳುತ್ತೇನೆ. ಅದಕ್ಕಾಗಿ ಅದನ್ನು ಹಾಕುವುದಿಲ್ಲವೆಂದರೆ ಸ್ವಾಗತ ಮಾಡುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ : 5 ಕಿಲೋವ್ಯಾಟ್ ಮೇಲಿನ ಜನರೇಟರುಗಳಿಗೆ ಮೊದಲು ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್‌ನಿಂದ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿತ್ತು. ಇದರ ಕೆಪಾಸಿಟಿಯನ್ನು ಹೆಚ್ಚು ಮಾಡಿದ್ದೇವೆ. ಏಕೆಂದರೆ ನಾಲ್ಕು ಸಾವಿರ ಜನರೇಟರ್ ಈ ರಾಜ್ಯದಲ್ಲಿ ಇರುವುದರಿಂದ ಹೆಚ್ಚು ಅನುಕೂಲವಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, 1959ರ 4ನೇ ಪ್ರಕರಣವು ಪ್ರತಿಯೊಬ್ಬ ಲೈಸೆನ್ಸ್‌ದಾರನು ಅಧಿನಿಯಮದ ಅಡಿಯಲ್ಲಿ ಸಂದಾಯವಾಗತಕ್ಕ ವಿದ್ಯುತ್ ತೆರಿಗೆಯನ್ನು ಸಂಗ್ರಹಿಸಿ ರಾಜ್ಯಸರ್ಕಾರಕ್ಕೆ ಸಂದಾಯ ಮಾಡಬೇಕೆಂದು ಅಗತ್ಯಪಡಿಸುತ್ತದೆ. ತೆರಿಗೆ ಮೊದಲೇ ಇದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಮೊದಲು ಏನೇನು ತೆರಿಗೆ, ಕಂಡೀಷನ್ಸ್ ಇತ್ತು, ಅದೆಲ್ಲಾ ಹಾಗೆ ಇದೆ. ಆದರೆ 5 ಕಿಲೋವ್ಯಾಟ್ ಮಿತಿ ಇದ್ದದ್ದನ್ನು 10 ಕಿಲೋವ್ಯಾಟ್‌ಗೆ ಜಾಸ್ತಿ ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಜಾಸ್ತಿ ಮಾಡಿದ್ದು ಗೊತ್ತಾಯಿತು. ಸ್ವಾಗತಾರ್ಹ ಅದರಲ್ಲೇನೂ ತೊಂದರೆ ಇಲ್ಲ. ಆದರೆ ಈ ತೆರಿಗೆ ಸಂದಾಯ ಮಾಡತಕ್ಕಂಥಾದ್ದು ತೆಗೆದುಹಾಕಬೇಕೆಂದು ಹೇಳುತ್ತೇನೆ. ತೆರಿಗೆ ಏಕೆ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೇ, ಇವತ್ತು ನಮ್ಮ ಕಾನೂನು ಅಡಿಯಲ್ಲಿ ಯಾವುದು ಪೇಮೆಂಟ್ ಆಫ್ ಎಲೆಕ್ಟ್ರಿಸಿಟಿ ಟ್ಯಾಕ್ಸ್ ಕಾಯಿದೆ 4ರ ಪ್ರಕಾರ ಏನಿದೆ ಎಂದರೆ

"Nothing in this section shall apply to any person who generates energy for the purpose of supplying it for the use of vehicles or vessels to the consumption of energy generated by means of generators not exceeding 5 K.W. capacity." ಎಂದಿದೆ ಇವತ್ತಿನ ಕಾನೂನಿನ ಅಡಿಯಲ್ಲಿ 5 ಕಿಲೋವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡತಕ್ಕಂಥ ಜನರೇಟಿಂಗ್‌ಗೆ ಟ್ಯಾಕ್ಸ್ ಇಲ್ಲ. ಆದರೆ ಸೆಂಟ್ರಲ್ ಎಲೆಕ್ಟ್ರಿಸಿಟಿ ರೂಲ್ಸ್‌ನಲ್ಲಿ ಒಂದು ಅಮೆಂಡ್‌ಮೆಂಟ್ ತಂದರು. ಅದನ್ನು ತಂದು 10 ಕಿಲೋವ್ಯಾಟ್

ಮೇಲೆ ಇರುವುದಕ್ಕೆ ಮಾತ್ರ ಇನ್ಸ್‌ಪೆಕ್ಟರ್‌ನಿಂದ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಮಾಡಿದರು. ಆ ರೂಲ್ಸ್‌ಗೆ 5 ಕಿಲೋವ್ಯಾಟ್ ಇರುವುದನ್ನು 10 ಕಿಲೋವ್ಯಾಟ್ ಮಾಡಿದ್ದು, 10 ಕಿಲೋವ್ಯಾಟ್ ಒಳಗಡೆ ಇರುವುದಕ್ಕೆ ಯಾವುದಕ್ಕೂ ಟ್ಯಾಕ್ಸ್ ಅನ್ವಯಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ತಾವು ಹೇಳುವುದು, 5 ಕಿಲೋವ್ಯಾಟ್‌ನಿಂದ 10 ಕಿಲೋವ್ಯಾಟ್‌ಗೆ ಏರಿಸಿ ಮಾಡಿದ್ದರಿಂದ ಇದು ಲಾಭವಾಗುವುದು ಎಷ್ಟು ಕೈಗಾರಿಕೆಗಳಿಗೆ? ಹೆಚ್ಚಿನ ಕೈಗಾರಿಕೆಗಳಿಗೆ ಲಾಭವಾಗುವುದಿಲ್ಲ. ಇದಕ್ಕೆ ನೀವು 10ರ ಬದಲು 25 ರಿಂದ 30 ಕಿಲೋವ್ಯಾಟ್ ಮಿತಿ ಏರಿಸಿ ಮಾಡಿದರೆ ಸ್ವಲ್ಪ ಹೆಚ್ಚು ಲಾಭವಾಗುತ್ತದೆ. ಈಗ ಮಾಡಿರುವ ಪ್ರಕಾರ ಹೆಚ್ಚಿನ ಕೈಗಾರಿಕೆಗಳಿಗೆ ಲಾಭವಾಗುವುದಿಲ್ಲ. ಮತ್ತು ತಾವು ಹೇಳುವಾಗ ಏನು ಸ್ಪಷ್ಟಣೆ ಕೊಟ್ಟಿದ್ದೀರಿ, 10 ಕಿಲೋವ್ಯಾಟ್‌ಗಿಂತ ಜಾಸ್ತಿ ಆಗತಕ್ಕಂಥ ಕೈಗಾರಿಕೆಗಳಿಗೆ ಟ್ಯಾಕ್ಸ್ ಹಾಕತಕ್ಕಂಥಾದ್ದು ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ದಯವಿಟ್ಟು ಆ ಕೆಲಸ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ.ಸಿ. ನಾಣಯ್ಯ : 5 ಕಿ. ವ್ಯಾಟ್ಸ್ ಮೇಲೆ ಟ್ಯಾಕ್ಸ್ ಇದೆ, 10 ಕಿ.ವ್ಯಾಟ್‌ಗೆ ಬೇಡ ಎಂದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ಈ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಲಾಭ ಬರಬೇಕೆಂದರೆ 25-30 ಕಿಲೋವ್ಯಾಟ್‌ಗೆ ಏರಿಸಿದರೆ ಲಾಭವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಈಗ ನಮ್ಮ ತಿದ್ದುಪಡಿ 5 ರಿಂದ 10 ಕಿಲೋವ್ಯಾಟ್‌ಗೆ. ಈಗ 5 ರವರೆಗೆ ಟ್ಯಾಕ್ಸ್‌ಗೆ ಎಗ್ಸೆಂಪ್ಷನ್ ಉಂಟು. 10ಕ್ಕೆ ಇದನ್ನು ಸೆಂಟ್ರಲ್ ರೆಕಮೆಂಡೇಷನ್ ಪ್ರಕಾರ ಮಾಡಿದ್ದೇವೆ. ಮುಂದೆ ಆ ವಿಚಾರ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ : ಎಲೆಕ್ಟ್ರಿಸಿಟಿಗೆ ಪರ್ಮಿಷನ್ ತೆಗೆದುಕೊಳ್ಳಬೇಕಾದರೆ ಆಗುತ್ತಿರತಕ್ಕಂಥ ಕಿರುಕುಳ ಏನು ಎನ್ನುವುದು ಕೈಗಾರಿಕೆ ಮಾಡುವವರಿಗೆ ಗೊತ್ತಾಗುತ್ತದೆಯೇ ವಿನಃ ಇದು ಬೇರೆಯವರಿಗೆ ಅರ್ಥವಾಗುವುದಿಲ್ಲ. ದಯಮಾಡಿ ಅದನ್ನು 25 ಕಿಲೋವ್ಯಾಟ್‌ಗೆ ಮಾಡಿದರೆ ಸ್ವಾಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ. ದಯಮಾಡಿ ಅದರ ಬಗ್ಗೆ ಯೋಚನೆ ಮಾಡಿ.

ಶ್ರೀ ಶರಣಬಸಪ್ಪ ದರ್ಶನಾಪುರ : ನಾವು ತೆರಿಗೆಯಾವುದೂ ಹಾಕುತ್ತಾ ಇಲ್ಲ. 5 ಕಿಲೋವ್ಯಾಟ್‌ನಿಂದ 10 ಕಿಲೋವ್ಯಾಟ್‌ಗೆ ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ಇದನ್ನು ನಾವು ವಾಸ್ತವವಾಗಿ ಸ್ವಾಗತಿಸಬೇಕು. 5 ಕಿಲೋವ್ಯಾಟ್‌ನಿಂದ 10 ಕಿಲೋವ್ಯಾಟ್‌ಗೆ ನೀವು ಜಾಸ್ತಿ ಮಾಡಿ ರ್ಯಾಟಿಫಿಕೇಷನ್ ತಂದಿರುವುದನ್ನು ನಾವು ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ನಾನೂ ಸಹ ಇದನ್ನು ಸ್ವಾಗತಿಸುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1998ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತ್ತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು),

ಪ್ರಸ್ತಾವದ ಅಂಗೀಕಾರ

11. 40 ಎ.ಎಂ

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, 1998ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1998ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು